Form No.4 (Civil)
Deposition
Sheets
(R.P.No.57)

# ವಿಶೇಷ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಸ್ಪೆಷಲ್.ಸಿ. ಸಂಖ್ಯೆ: 85/2018

ಪ್ರಾ.ಸಾ. 1 ಚಾ.ಸಾ. 1

| | | |
|---|---|---|
| ಹೆಸರು | : | ಅರುಣಕುಮಾರ |
| ತಂದೆಯ ಹೆಸರು | : | ಯೇಸುಮಿತ್ರ |
| ವಯಸ್ಸು | : | 41 ವರ್ಷ |
| ಉದ್ಯೋಗ | : | ಪಿಐ ಅಶೋಕ ನಗರ ಕಲಬುರಗಿ |
| ವಾಸ | : | ಕಲಬುರಗಿ |

ವಿ.ಸಿ.ಯ ಮುಖಾಂತರ ಪ್ರಮಾಣ ವಚನ ಭೋಧಿಸಿದ ದಿನಾಂಕಃ 24-03-2025
ಮುಖ್ಯ ವಿಚಾರಣೆ ವಿಶೇಷ ಸರಕಾರಿ ಅಭಿಯೋಜಕರಿಂದ

ನಾನು ಸೆಪ್ಟಂಬರ್ 2017 ರಿಂದ ಮಾರ್ಚ 2018 ರ ವರೆಗೆ ನಾನು ಗ್ರಾಮೀಣ ಠಾಣೆಯಲ್ಲಿ ಪಿಎಸಐ ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ.

2. ನನಗೆ ಚಾಸಾ-2 ರಿಂದ 7 ರವರ ಪರಿಚಯ ಇದೆ. ದಿಃ 08.01.2014 ರಂದು ಬೆಳಿಗ್ಗೆ ನಾನು ಠಾಣಾ ಪ್ರಭಾರದಲ್ಲಿದ್ದಾಗ ಖಚಿತ ಬಾತ್ಮಿ ಬಂದಿದ್ದೇನೆಂದರೆ ಎಸ್. ಹೊಸಳ್ಳಿ ಸಿಮಾಂತರದ ಕಟಗಿ ಶಹಾಪೂರ – ಎಸ್.ಹೊಸಳ್ಳಿ ರೋಡಿನ ಪಕ್ಕದಲ್ಲಿ ಅನಧಿಕೃತವಾಗಿ ಗಾಂಜಾ ಗಿಡಗಳು ಬೇಳೆದ ಬಾತ್ಮಿ ಬಂದ ಮೇರೆಗೆ ಸ್ಥಳಕ್ಕೆ ಹೋಗಿ ದಾಳಿ ಮಾಡಲು ಒಬ್ಬ ಪತ್ರಾಂಕಿತ ಅಧಿಕಾರಿ ಚಾಸಾ-7 ಪ್ರಹಲಾದ ಜೋಶಿ ಅವರಿಗೆ ದಾಳಿ ಸಮಯಕ್ಕೆ ಹಾಜರಿರಲು ಕೇಳಿಕೊಂಡಿದ್ದು ಅವರು ಒಪ್ಪಿಕೊಂಡಿದ್ದು ನಮ್ಮ ಠಾಣಾ ಸಿಬ್ಬಂದಿ ಚಾಸಾ-4 ಮತ್ತು 5 ರವರು, ಬೆಳಿಗ್ಗೆ 11-15 ಗಂಟೆಗೆ ನಮ್ಮ ಇಲಾಖಾ ಜೀಪನಲ್ಲಿ ಹೊರಟು ಬಂದಳ್ಳಿ ಗ್ರಾಮಕ್ಕೆ ಹೋಗಿ ಅಲ್ಲಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕರಾದ ಶಶಿಕಾಂತ, ಶಶಿಧರ ಮಟ್ಟಿ ಇವರಿಗೆ ದಾಳಿಯ ಮಾಹಿತಿ ತಿಳಿಸಿ ಅವರನ್ನು ಪಂಚರಾಗಲು ಕೇಳಿಕೊಂಡಾಗ ಅವರು ಒಪ್ಪಿಕೊಂಡಿದ್ದು ಎಲ್ಲರೂ ಕೂಡಿಕೊಂಡು ಬೆಳಿಗ್ಗೆ 11-30 ಗಂಟೆಗೆ ನಮ್ಮ ಇಲಾಖಾ ಜೀಪನಲ್ಲಿ ಹೊರಟು ಎಸ್. ಹೊಸಳ್ಳಿ ಮತ್ತು ಕಟಗಿ ಶಹಾಪೂರ ಮಾರ್ಗ ಜೀಪ ನಿಲ್ಲಿ ಎಲ್ಲರೂ ಜೀಪನಿಂದ ಇಳಿದು ರೋಡಿನ ದಕ್ಷಿಣ ದಿಕ್ಕಿನ ಕಡೆಗೆ ನಡೆದುಕೊಂಡು ಹೋದಾಗ ಉಳ್ಳಾಡ್ಡಿ ಹೊಲದಲ್ಲಿ ಒಬ್ಬ ವ್ಯಕ್ತಿ ಸದೆ ತೆಗೆಯುತ್ತಿದ್ದನು, ನಾವು ಆತನ ಹತ್ತಿರ ಹೋಗುತ್ತಿದಂತೆ ಅವನು ಓಡಿ ಹೋದನು. ಅವನ ಬಗ್ಗೆ

ವಿಚಾರಿಸಲಾಗಿ ಅವನ ಹೆಸರು ಶರಣಪ್ಪ ತಂದೆ ಬಸಪ್ಪ ಸಾಃ ಹೊಸಳ್ಳಿ ಎಂದು ಗೊತ್ತಾಗಿದ್ದು ನಾವು ಸದರಿ ಹೊಲವನ್ನು ಪಂಚರ ಸಮಕ್ಷಮ ಪರಿಶೀಲಿಸಿದಾಗ ಉಳ್ಳಾಗಡ್ಡಿ ಜೊತೆಯಲ್ಲಿ ಗಾಂಜಾದ ಗಿಡಗಳನ್ನು ಅಕ್ರಮವಾಗಿ ಬೆಳೆಸಿದ್ದು ಕಂಡು ಬಂತು. ನಾನು ಪಂಚರ ಸಮಕ್ಷಮ ಸದರಿ ಗಾಂಜಾ ಗಿಡಗಳನ್ನು ದೇವರಾಜ ತಂದೆ ಬಸಪ್ಪ ಸಾಃ ಬಂದಳ್ಳಿ ಇವರಿಂದ ತೂಕಮಾಡಿಸಿದ್ದು ಒಟ್ಟು 3 ಕೆ.ಜಿ. ಆಗಿರುತ್ತದೆ. ಅದರ ಕಿಮ್ಮತ್ತು 3,000/- ಸದರಿ ಗಾಂಜಾವನ್ನು ಒಂದು ಗೋಣಿ ಚೀಲದಲ್ಲಿ ಹಾಕಿ ನಾನು ಮತ್ತು ಪಂಚರು ಸಹಿ ಮಾಡಿದ ಚೀಟಿ ಅಂಟಿಸಿ ವಶಕ್ಕೆ ತೆಗೆದುಕೊಂಡಿರುತ್ತೇನೆ. ಸದರಿ ಪಂಚನಾಮೆಯನ್ನು ಮಧ್ಯಾಹ್ನ 12-30 ರಿಂದ 1-30 ಗಂಟೆಯವರೆಗೆ ಮಾಡಿರುತ್ತೇನೆ. ಜಪ್ತಿಪಡಿಸಿಕೊಂಡ ಗಾಂಜಾದಲ್ಲಿ 200 ಗ್ರಾಮ ಗಾಂಜಾವನ್ನು ಪ್ರತ್ಯೇಕವಾಗಿ ಪಡೆದಿದ್ದು ಇರುತ್ತದೆ. ನಂತರ ಠಾಣೆಗೆ ಬಂದು ಮುದ್ದೆ ಮಾಲಿನೊಂದಿಗೆ ವರದಿ ನೀಡಿರುತ್ತೇನೆ. ಜಪ್ತಿ ಪಂಚನಾಮೆಯನ್ನು ನಿ.ಪಿ.1 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.1(ಎ) ಎಂದು ಗುರುತಿಸಲಾಯಿತು. ವರದಿಯನ್ನು ನಿ.ಪಿ.2 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.2(ಎ) ಎಂದು ಗುರುತಿಸಲಾಯಿತು. ಓಡಿ ಹೋದ ಆರೋಪಿತನು ಇಂದು ನ್ಯಾಯಾಲಯದ ಮುಂದೆ ಇರುತ್ತಾನೆ. ಸದರಿ ಸ್ಯಾಂಪಲ ಗಾಂಜಾವನ್ನು ಮು.ಮಾ.1 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು ಆರೋಪಿಯ ಪರವಾಗಿ ಶ್ರೀ. ವಿ.ಆರ್.ಎಸ್. ವಕೀಲರಿಂದ</u>

3. ಗ್ರಾಮೀಣ ಪೊಲೀಸಠಾಣೆಯಿಂದ ಡಿಗ್ರಿ ಕಾಲೇಜ 1 ರಿಂದ ವರೆ ಕಿ.ಮೀ. ದೂರ ಆಗುತ್ತದೆ ಎಂದರೆ 1 ಕಿ.ಮೀ. ದೂರ ಆಗುತ್ತದೆ. ನಾನು ಡಿಗ್ರಿ ಕಾಲೇಜಗೆ ಹೋದಾಗ ಬೆಳಿಗ್ಗೆ 11-10 ಗಂಟೆ ಆಗಿತ್ತು. ನಾವು ಸದರಿ ಕಾಲೇಜಗೆ ಹೋದಾಗ ಪತ್ರಾಂಕಿತ ಅಧಿಕಾರಿ ಚೆಂಬರನಲ್ಲಿ ಇದ್ದರು. ನಾನು ಅವರಿಗೆ ಬರುವಂತೆ ನೋಟಿಸನ್ನು ಕೊಟ್ಟಿರುತ್ತೇನೆ. ಆ ಬಗ್ಗೆ ಸ್ವೀಕೃತಿ ಪಡೆದಿಲ್ಲ ನಂತರದಲ್ಲಿ ಪಡೆದಿದ್ದೇನೆ. ನಾನು ಖಾಸಗಿ ಪಂಚರನ್ನು ಕರೆಸುವ ಪ್ರಯತ್ನ ಮಾಡಲಿಲ್ಲ. ನಾವು ದಾಳಿಯ ಬಗ್ಗೆ ಠಾಣಾ ದಿನಚರಿಯಲ್ಲಿ ಬರೆದಿದ್ದೇನೆ. ನಾನು ದಾಳಿಗೆ ಹೋಗುವ ಮೊದಲು ಮೇಲಾಧಿಕಾರಿಗಳ ಅನುಮತಿಯನ್ನು ಲಿಖಿತವಾಗಿ ಪಡೆದುಕೊಂಡಿಲ್ಲ. ಯಾದಗಿರಿ ಇಂದ ಬಂದಳ್ಳಿ ಸುಮಾರು 4-5 ಕಿ.ಮೀ. ದೂರ ಇದೆ ಎಂದರೆ ಸರಿ. ಬಂದಳ್ಳಿಯಿಂದ ಸ್ಥಳಕ್ಕೆ 12 ರಿಂದ 15 ಕಿ.ಮೀ. ಆಗುತ್ತದೆ ಎಂದರೆ ಸರಿ. ಬಂದಳ್ಳಿಗೆ ಹೋದಾಗ ಪಂಚರಿಗೆ ನೊಟೀಸನ್ನು ಜಾರಿ ಮಾಡಿದ್ದು ನಂತರದಲ್ಲಿ ಸ್ವೀಕೃತಿ ಪಡೆದಿದ್ದೇನೆ. ಸದರಿ ಪಂಚರಿಗೆ ನೀಡಿದ ಮನವಿ ಪತ್ರವನ್ನು ಪಂಚನಾಮೆಯ ಜೊತೆಗೆ ಸಲ್ಲಿಸಿಲ್ಲ. ನಾನು ಸ್ಥಳಕ್ಕೆ ಹೋಗುವ ಮೊದಲು ಗ್ರಾಮಲೆಖಿಗರನ್ನು ಕರೆದುಕೊಂಡು ಹೋಗಿಲ್ಲ. ಅದೇ ರೀತಿ ಎಸ್.ಹೊಸಳ್ಳಿ ದಳಪತಿಗೆ ಹೇಳಿ ಕರೆದುಕೊಂಡು ಹೋಗಿಲ್ಲ. ನಮಗೂ ಮತ್ತು ಆರೋಪಿಗೂ ಆತ ಓಡಿ ಹೋಗುವ ಕಾಲಕ್ಕೆ 100 ಮೀಟರ ಅಂತರ ಇತ್ತು. ಅಕ್ಕಪಕ್ಕದವರನ್ನು ವಿಚಾರ ಮಾಡಿ ಆರೋಪಿ ಹೆಸರು ತಿಳಿದುಕೊಂಡೆ. ಫಿರ್ಯಾದಿ ಮತ್ತು ಪಂಚನಾಮೆಯಲ್ಲಿ ಅಕ್ಕಪಕ್ಕದವರನ್ನು ವಿಚಾರಿಸಿದ ವಿಷಯ ಬರೆದಿಲ್ಲ. ಅಕ್ಕಪಕ್ಕದವರ

ಹೇಳಿಕೆ ಪಡೆದುಕೊಂಡಿರುವುದಿಲ್ಲ. ನಾನು ಹೋಗಿದ್ದ ಜೀಪ ನಂಬರನ್ನು ಪಂಚನಾಮೆಯಲ್ಲಿ ನಮೂದು ಮಾಡಿಲ್ಲ. 2 ಕಡೆ ತಿದ್ದುಪಡಿಯಾಗಿದ್ದು ಪಂಚನಾಮೆಯಲ್ಲಿ ಚಿಕ್ಕ ರುಜು ಮಾಡಿಲ್ಲ ಎಂದರೆ ಸರಿ. ಪಂಚನಾಮೆಯಲ್ಲಿ ಸರ್ವೆ ನಂಬರ ಬರೆದಿಲ್ಲ ಎಂದರೆ ಸರಿ. ಪಂಚನಾಮೆಯಲ್ಲಿ ಅದು ಯಾವ ರೀತಿ ತೂಕದ ಯಂತ್ರ ಎಂದು ನಮೂದು ಮಾಡಿಲ್ಲ. ಚಾಸಾ-6 ಅವರಿಗೆ ತೂಕದ ಯಂತ್ರ ತರುವಂತೆ ನೋಟಿಸ ಕೊಟ್ಟಿಲ್ಲ. ನನ್ನ ವರದಿಯಲ್ಲಿ ದಿಃ 23.10.2016 ರಂದು ನಮೂದು ಆಗಿದೆ ಎಂದರೆ ಸರಿ. ನಾನು ದಾಳಿಗೆ ಹೋಗುವ ಮೊದಲು ಠಾಣಾಧಿಕಾರಿ ಬಸವರಾಜ ಇದ್ದರು. ಜಪ್ತಿ ಪಂಚನಾಮೆಯಾದ ನಂತರ ಠಾಣಾ ಮಾಲಖಾ ರಜೀಸ್ಟರದಲ್ಲಿ ನಾನು ನಮೂದು ಮಾಡಿಲ್ಲ. ಇನವೆಂಟ್ರಿ ಪಂಚನಾಮೆ ತನಿಖಾಧಿಕಾರಿ ಮಾಡಿಸಿರುತ್ತಾರೆ. ಗಾಂಜಾ ಗಿಡಗಳನ್ನು ಬೇರು, ಗಿಡಿ, ಎಲೆ, ಸಹಿತ ವಶಕ್ಕೆ ಪಡೆದಿದ್ದೇವೆ ಎಂದು ನಮೂದು ಮಾಡಿದ್ದೇವೆ. ಆ ದಿನ ಕರ್ತವ್ಯಕ್ಕೆ ಹೋಗಿ ಬಂದ ಬಗ್ಗೆ ವರದಿಯ ಜೊತೆ ಠಾಣಾ ದಿನಚರಿಯನ್ನು ಕೊಟ್ಟಿರುವುದಿಲ್ಲ. ಎಸ್. ಹೊಸಳ್ಳಿ ಗ್ರಾಮದ ದಳಪತಿಯನ್ನು ನಾನು ವಿಚಾರ ಮಾಡಿಲ್ಲ.

4. ನನಗೆ ಚಾಸಾ-2 ರಿಂದ 7 ರವರ ಪರಿಚಯ ಇದೆ. ದಿಃ 08.01.2014 ರಂದು ಬೆಳಿಗ್ಗೆ ನಾನು ಠಾಣಾ ಪ್ರಭಾರದಲ್ಲಿದ್ದಾಗ ಖಚಿತ ಬಾತ್ಮಿ ಬಂದಿದ್ದೇನೆಂದರೆ ಎಸ್. ಹೊಸಳ್ಳಿ ಸಿಮಾಂತರದ ಕಟಗಿ ಶಹಾಪೂರ – ಎಸ್.ಹೊಸಳ್ಳಿ ರೋಡಿನ ಪಕ್ಕದಲ್ಲಿ ಅನಧಿಕೃತವಾಗಿ ಗಾಂಜಾ ಗಿಡಗಳು ಬೇಳೆದ ಬಾತ್ಮಿ ಬಂದ ಮೇರೆಗೆ ಸ್ಥಳಕ್ಕೆ ಹೋಗಿ ದಾಳಿ ಮಾಡಲು ಒಬ್ಬ ಪತ್ರಾಂಕಿತ ಅಧಿಕಾರಿ ಚಾಸಾ-7 ಪ್ರಹಲಾದ ಜೋಶಿ ಅವರಿಗೆ ದಾಳಿ ಸಮಯಕ್ಕೆ ಹಾಜರಿರಲು ಕೇಳಿಕೊಂಡಿದ್ದು ಅವರು ಒಪ್ಪಿಕೊಂಡಿದ್ದು ನಮ್ಮ ಠಾಣಾ ಸಿಬ್ಬಂದಿ ಚಾಸಾ-4 ಮತ್ತು 5 ರವರು, ಬೆಳಿಗ್ಗೆ 11-15 ಗಂಟೆಗೆ ನಮ್ಮ ಇಲಾಖಾ ಜೀಪನಲ್ಲಿ ಹೊರಟು ಬಂದಳ್ಳಿ ಗ್ರಾಮಕ್ಕೆ ಹೋಗಿ ಅಲ್ಲಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕರಾದ ಶಶಿಕಾಂತ, ಶಶಿಧರ ಮಟ್ಟಿ ಇವರಿಗೆ ದಾಳಿಯ ಮಾಹಿತಿ ತಿಳಿಸಿ ಅವರನ್ನು ಪಂಚರಾಗಲು ಕೇಳಿಕೊಂಡಾಗ ಅವರು ಒಪ್ಪಿಕೊಂಡಿದ್ದು ಎಲ್ಲರೂ ಕೂಡಿಕೊಂಡು ಬೆಳಿಗ್ಗೆ 11-30 ಗಂಟೆಗೆ ನಮ್ಮ ಇಲಾಖಾ ಜೀಪನಲ್ಲಿ ಹೊರಟು ಎಸ್. ಹೊಸಳ್ಳಿ ಮತ್ತು ಕಟಗಿ ಶಹಾಪೂರ ಮಾರ್ಗ ಜೀಪ ನಿಲ್ಲಿ ಎಲ್ಲರೂ ಜೀಪನಿಂದ ಇಳಿದು ರೋಡಿನ ದಕ್ಷಿಣ ದಿಕ್ಕಿನ ಕಡೆಗೆ ನಡೆದುಕೊಂಡು ಹೋದಾಗ ಉಳ್ಳಾಡ್ಡಿ ಹೊಲದಲ್ಲಿ ಒಬ್ಬ ವ್ಯಕ್ತಿ ಸದೆ ತೆಗೆಯುತ್ತಿದ್ದನು, ನಾವು ಆತನ ಹತ್ತಿರ ಹೋಗುತ್ತಿದಂತೆ ಅವನು ಓಡಿ ಹೋದನು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅವನ ಬಗ್ಗೆ ವಿಚಾರಿಸಲಾಗಿ ಅವನ ಹೆಸರು ಶರಣಪ್ಪ ತಂದೆ ಬಸಪ್ಪ ಸಾಃ ಹೊಸಳ್ಳಿ ಎಂದು ಗೊತ್ತಾಗಿದ್ದು ನಾವು ಸದರಿ ಹೊಲವನ್ನು ಪಂಚರ ಸಮಕ್ಷಮ ಪರಿಶೀಲಿಸಿದಾಗ ಉಳ್ಳಾಗಡ್ಡಿ ಜೊತೆಯಲ್ಲಿ ಗಾಂಜಾದ ಗಿಡಗಳನ್ನು ಅಕ್ರಮವಾಗಿ ಬೆಳೆಸಿದ್ದು ಕಂಡು ಬಂತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪಂಚರ ಸಮಕ್ಷಮ ಸದರಿ ಗಾಂಜಾ ಗಿಡಗಳನ್ನು ದೇವರಾಜ ತಂದೆ ಬಸಪ್ಪ ಸಾಃ ಬಂದಳ್ಳಿ ಇವರಿಂದ ತೂಕಮಾಡಿಸಿದ್ದು ಒಟ್ಟು

3 ಕೆ.ಜಿ. ಆಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದರ ಕಿಮ್ಮತ್ತು 3,000/- ಸದರಿ ಗಾಂಜಾವನ್ನು ಒಂದು ಗೋಣಿ ಚೀಲದಲ್ಲಿ ಹಾಕಿ ನಾನು ಮತ್ತು ಪಂಚರು ಸಹಿ ಮಾಡಿದ ಚೀಟಿ ಅಂಟಿಸಿ ವಶಕ್ಕೆ ತೆಗೆದುಕೊಂಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಪಂಚನಾಮೆಯನ್ನು ಮಧ್ಯಾಹ್ನ 12-30 ರಿಂದ 1-30 ಗಂಟೆಯವರೆಗೆ ಮಾಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಜಪ್ತಿಪಡಿಸಿಕೊಂಡ ಗಾಂಜಾದಲ್ಲಿ 200 ಗ್ರಾಮ ಗಾಂಜಾವನ್ನು ಪ್ರತ್ಯೇಕವಾಗಿ ಪಡೆದಿದ್ದು ಇರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ಠಾಣೆಗೆ ಬಂದು ಮುದ್ದೆ ಮಾಲಿನೊಂದಿಗೆ ವರದಿ ನೀಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಠಾಣೆಯಲ್ಲಿ ಕುಳಿತು ಅಂಕಿ ಅಂಶಕ್ಕಾಗಿ ಆರೋಪಿಯ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ-ಇಲ್ಲ</u>

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಯಾದಗಿರಿ.